ನಖಾತೆ ಆನಂದರಾವ್, ಮೈಸೂರು

ಜೀವಮಾನವಿಡೀ ನಗುನಗುತ್ತಾ ಇರಲು ಏನು ಮಾಡಬೇಕು?



‘ಹಸಿವಿನಲ್ಲೂ ಹಬ್ಬಾನೇ; ದಿನವು ನಿತ್ಯ ಉಗಾದಿನೇ; ಪ್ರೀತಿನೇ ಆ ದ್ಯಾವ್ರು ತಂದ ಆಸ್ತಿ ನಮ್ಮ ಪಾಲಿಗೆ’ ಎಂಬ ಭಾವ ಬೇಕು.

ರಾಜಶೇಖರ ಹಾದಿಮನಿ, ಧಾರವಾಡ

ಅರ್ಥ್ವಿಲ್ಲದ್ ಪ್ರಶ್ನೆಗೆ ಸುಮ್ನಿರೋದುತ್ಮ ಅಂದ್ರು ಕುವೆಂಪು. ಆದ್ರಿಂದ್ಲೇ ನಿಮ್ಮ ಕ.ಬು. ತುಂಬಿ ತುಳುಕಿದೆ; ಸರಿಯೆ?

ನಮ್ಮಲ್ಲಿ ಕ.ಬು.ವನ್ನು ಗಂಟೆಗಂಟೆಗೆ ಖಾಲಿ ಮಾಡಿಬಿಡುವುದರಿಂದ ಆ ಪರಿಸ್ಥಿತಿ ಇಲ್ಲ.

ಅಮರಯ್ಯಾ ಪತ್ರಿಮಠ, ಶೋರಾಪುರ

ನಮ್ಮ ಹಿತೈಷಿಗಳನ್ನು ಗುರುತಿಸುವುದು ಹೇಗೆ?

ನಿಮ್ಮ ಕಷ್ಟಗಳ ಫಿಲ್ಟರ್‌ನಲ್ಲಿ ಅವರನ್ನು ಶೋಧಿಸಿ ನೋಡಿ.

ಬಿ. ಚಂದ್ರೇಗೌಡ, ಬೆಂಗಳೂರು

ಹೆಣ್ಣನ್ನು ಮಾನಿನಿ ಎಂದು ಕರೆಯುವುದರ ಉದ್ದೇಶವೇನು?



ಅದು ಮ್ಯಾನಿನಿಯ ಬಳಕೆರೂಪವಂತೆ. ಮ್ಯಾನ್ ಇನಿಯಳನ್ನಾಗಿ ಬಯಸತಕ್ಕವಳೇ ಮಾನಿನಿ.

ಮಹಾವೀರ ಕಾಸರ, ಶಿವಮೊಗ್ಗ

ಸದನ, ಕದನ, ದನ ಇವುಗಳ ಸಂಬಂಧವೇನು?

ಮೂರರ ಅಸ್ತಿತ್ವವೂ ಮೇವಿಗಾಗಿಯೇ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ನಾವು ಯಾರಿಗಾಗಿ, ಯಾವುದಕ್ಕಾಗಿ ತ್ಯಾಗ ಮಾಡಬೇಕು?

ಮುಂದಿನ ಪೀಳಿಗೆಗಾಗಿ, ಸ್ವಚ್ಛ ಪರಿಸರಕ್ಕಾಗಿ.

ಗಂಜಾಂ ನಾಗರಾಜ್, ಮೈಸೂರು

ಲಕ್ಷ್ಮೀಕಟಾಕ್ಷ ಎಂದು ಹೇಳುವವರು ಶನಿಕಾಟ ಎಂದು ಏಕೆ ಹೇಳುತ್ತಾರೆ?

ಅವಳು ತಂದ ಆದಾಯಕ್ಕೆ ಇವನು ವಿದಾಯದ ದಾರಿ ತೋರುತ್ತಾನಲ್ಲ.

ಎನ್. ವೈದೇಹಿ, ಮೈಸೂರು

ಜನ್ಮವಿತ್ತವಳ ತಾಯ್ತನಕ್ಕೂ ದತ್ತು ಪಡೆದವಳ ತಾಯ್ತನಕ್ಕೂ ವ್ಯತ್ಯಾಸ?

ದತ್ತು ಪಡೆದವಳು ಹಾಲೂಡಿಸುವ ಸುಖದಿಂದ ವಂಚಿತಳಾಗುತ್ತಾಳೆ.

ಕೆ.ಎಂ. ವಿಭೂತಿ, ಹರಿಹರ

ತಾಳ್ಮೆಯಿರದ ಹೆಣ್ಣಿಗೆ ತಾಳಿ ಏಕೆ ಗುರುವೆ?

ಅದು ಅವಳಿಗಲ್ಲ. ‘ಅವಳನ್ನು ತಾಳಿಕೊಳ್ಳಿ’ ಎಂದು ತಾಳಿ ಕಂಡವರಿಗೆ ಸಂದೇಶ ನೀಡಲು.

ಎಸ್ಸೆನ್ ಮಹಾಬಲರಾವ್, ಎನ್ನರ್‌ಪುರ

ಸಹಿ ತೆಗೆದುಕೊಳ್ಳುವಾಗ ಬೆರಳು ತಾಗಿ ಕರೆಂಟ್ ಹೊಡೆಯಿತು?

ಕೊಂಚ ತಲೆಯೆತ್ತಿದ್ದರೆ ಅವಳ ಬಿರುನೋಟಕ್ಕೆ ಗ್ರೌಂಡ್ ಆಗುತ್ತಿದ್ದಿರಂತೆ.

ಎಸ್. ಶರತ್, ಬೆಂಗಳೂರು

ನಮ್ಮ ಮಕ್ಕಳಿಗಿಂತ ಹಿರಿಯ ನಾಗರಿಕರಾದ ನಾವೇ ಹೆಚ್ಚು ಆರೋಗ್ಯವಾಗಿರಲು ಕಾರಣ?

ಹೋಣೆಯೆಲ್ಲ ಅವರಿಗೆ ವರ್ಗ ಆಗಿದೆಯಲ್ಲ. ಈ ದಿನಗಳಲ್ಲಿ ಹೊರೆ ಇಲ್ಲದವನು ದೊರೆ!

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಮನುಷ್ಯನಿಗೆ ಸಹನೆ, ತಾಳ್ಮೆ ಇರದಿದ್ದರೆ ಏನಾಗುತ್ತದೆ ಸಾರ್?

ಬಿಪಿ, ಮಧುಮೇಹದ ಮಾತ್ರೆಗಳಿಗೆ ಡಿಮ್ಯಾಂಡ್ ಹೆಚ್ಚುತ್ತದೆ.

ಶಶಾಂಕ್ ಪ್ರಿಯಾ ಪೆಮ್ಮನಹಳ್ಳಿ, ಪಾವಗಡ

ನಮ್ಮ ಅಪ್ಪನಿಗೆ ಸಿಟ್ಟು ಬಂದಾಗ ಏನು ಮಾಡಬೇಕು?

ಅಮ್ಮನ ಫೋಟೊ ತೋರಿಸಿ, ತಣ್ಣಗಾಗುತ್ತಾರೆ.

ಬಾ.ರಂ. ಸುರೇಶ್, ಶಿವಮೊಗ್ಗ

ಹೆಣ್ಣು, ಹೊನ್ನು, ಮಣ್ಣು, ಹೆಂಡ ಇವುಗಳು ಒಟ್ಟಿಗೆ ಸೇರಿದರೆ ಪರಿಣಾಮ ಏನಾಗಬಹುದು?

‘ಅಸಾರಾಮ್’ ಮಾದರಿ ಆಶ್ರಮಗಳು ಅಸ್ತಿತ್ವಕ್ಕೆ ಬರಬಹುದು.

## ವಾರದ ಪ್ರಶ್ನೆ

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಈಗಿನ ಕಿರುತೆರೆ, ಹಿರಿತೆರೆ ನಟರು ಬಹುತೇಕ ಗಡ್ಡಧಾರಿಗಳಾಗಿಯೇ ನಟಿಸುತ್ತಿರುವುದಕ್ಕೆ ಕಾರಣ?

ಬೋಳುಮುಖಕ್ಕೆ ಮೇಕಪ್ ವೆಚ್ಚ ಹೆಚ್ಚಾಗುವುದರಿಂದ ದಾಡಿ ಬಿಡಿ ಎಂದರಂತೆ ನಿರ್ಮಾಪಕರು.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಕೆಲವರು ಹರಿದ ಚಪ್ಪಲಿಗೆ ತೇಪೆ, ಹೊಲಿಗೆ ಹಾಕಿ ಬಳಸೋದು ಏಕೆ?

ಜಗವನ್ನೇ ಕಾಯುವ ದೇವನೂ ಚಪ್ಪಲಿ ಕಾಯಲಾರನಾದ್ದರಿಂದ ಅಲ್ಲಿಗೆ ಇಂತಹದ್ದೇ ಬೆಸ್ಟ್ ಅಂತೆ.

ಎಂ.ಜಿ. ಉಮಾ, ಬಳ್ಳಾರಿ

ಮನೆ ನಿಶ್ಶಬ್ದ ಇರಲು ಎಲ್ಲರ ಕೈಲಿ ಮೊಬೈಲ್ ಇದ್ದರೆ ಸಾಕು. ದೇಶ ನಿಶ್ಶಬ್ದವಾಗಿರಲು?

ರಾತ್ ಆಟ್ ಬಜೇ ಕೋ ಮೋದಿ ಟೀವಿಯಲ್ಲಿ ಕಾಣಿಸಿಕೊಂಡು ‘ಮಿತ್ರೋ...’ ಎಂದರೆ ಸಾಕು.

ಜಿ. ಪ್ರದೀಪಕುಮಾರ್, ಹೂವಿನಹಡಗಲಿ

ತಾಯಿಯೇ ಮೊದಲ ಗುರುವಾದರೆ ತಂದೆ ಯಾರು?



ತಾಯಿಯ ಮೊದಲ ಶಿಷ್ಯ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಕಪ್ಪು ಹೋರಾಟ, ಕತ್ತಲು, ದುಃಖದ ಸಂಕೇತ. ಆದರೆ ಅಯ್ಯಪ್ಪ ಭಕ್ತರು ಕಪ್ಪು ಧರಿಸಲು ಕಾರಣ?

ಅಯ್ಯಪ್ಪನೆಂದರೆ ಬೆಳಕಲ್ಲವೆ! ಪಾಪದ ಕತ್ತಲು ಹೊದ್ದಿದ್ದೇವೆ, ಪರಿಹಾರದ ಬೆಳಕಾಗಿ ಬಾ ಎಂದು ಸೂಚಿಸಲು.

ಹೆಚ್.ಎಮ್. ಅನಂತಪದ್ಮನಾಭ, ಮೈಸೂರು

ಗಣಕಯಂತ್ರದ ‘ಇಲಿ’ ಗಂಡೋ ಹೆಣ್ಣೋ?

ಕರ್ಸರ್ (ಸದಾ ಕರ್ಸ್ ಮಾಡುವುದು) ಗಂಡು; ಅದರ ಜೋಡಿಯಾದ್ದರಿಂದ ಮೌಸ್ ಹೆಣ್ಣು.

■ ರಾಮ್